

# ರಸಗುಲ್ಲಾ ಹುಟ್ಟಿದ್ದು ಹೇಗೆ?

ರಸಗುಲ್ಲಾ ಎಂದರೆ ಯಾರಿಗೆ ತಾನೇ ಇಷ್ಟವಿಲ್ಲ? ಬಾಯಲ್ಲಿಟ್ಟರೆ ಕರಗುವ, ಹಿತವಾದ ಸ್ವಾದ ನೀಡುವ ಸಿಹಿತಿಂಡಿ ಚಿಕ್ಕಮಕ್ಕಳಾದಿಯಾಗಿ ಎಲ್ಲರಿಗೂ ಪ್ರಿಯವೇ. ಈ ಸಿಹಿ ತಿಂಡಿ ಹುಟ್ಟಿಕೊಂಡದ್ದು ಹೇಗೆ? ಇಲ್ಲಿದೆ ರೋಚಕ ತಿಂಡಿ ಕಥೆ.

■ ಮುರಲೀಧರ ಕುಲಕರ್ಣಿ

ಹಾಲಿನಿಂದ ಅನೇಕ ಸಿಹಿತಿಂಡಿಗಳನ್ನು ಮಾಡುತ್ತಾರೆ. ಪೇಡಾ, ಬರ್ಫಿ, ರಸಮಲಾಯಿ, ಕಲಾಕಂದ, ಶ್ರೀಖಂಡ, ಬಾಸುಂದಿ. ರಸಗುಲ್ಲಾ ಇತ್ಯಾದಿ. ಈ ಎಲ್ಲಾ ಸಿಹಿತಿಂಡಿಗಳಲ್ಲಿ ಬಂಗಾಳಿಗಳಿಗೆ ತುಂಬ ಪ್ರಿಯವಾದ ಸಿಹಿತಿಂಡಿಯೆಂದರೆ ರಸಗುಲ್ಲಾ. ಅದು ನಮಗೂ ಇಷ್ಟವೇ. ರಸಗುಲ್ಲಾವನ್ನು ಬಾಯಿಯಲ್ಲಿಟ್ಟುಕೊಂಡು ಚಪ್ಪರಿಸುವ ಆನಂದ ಅಷ್ಟಿಷ್ಟಲ್ಲ. ಬಂಗಾಳಿಗಳಿಗೆ ರಸಗುಲ್ಲಾ ತುಂಬಾ ಇಷ್ಟವಾದ ಸಿಹಿತಿಂಡಿಯಾಗಿರಲು ಮುಖ್ಯ ಕಾರಣ ಅದು ಹುಟ್ಟಿದ್ದು ಕೋಲ್ಕತ್ತಾದಲ್ಲಿ 1868ರಲ್ಲಿ.

ಇಂದಿನ ಕಾಲದಲ್ಲಿ ಹಾಲನ್ನು ಒಡೆಸಿ ಅದರಿಂದ ಪನೀರ್ ಹಾಗೂ ರಸಗುಲ್ಲಾ ತಯಾರಿಸುತ್ತಾರೆ. ಇವೆರಡು ಇಂದಿನ ಕಾಲದಲ್ಲಿ ತುಂಬ ಹೆಚ್ಚಿನ ಬೇಡಿಕೆ ಇರುವ ಪದಾರ್ಥಗಳೇ. ಆದರೆ ಹಿಂದಿನ ಕಾಲದಲ್ಲಿ ಹಾಲನ್ನು ಒಡೆದು ಅದರಿಂದ ತಿಂಡಿ ತಯಾರಿಸುವುದು ನಿಷಿದ್ಧವಾಗಿತ್ತು. ಆಗಿನ ಕಾಲದಲ್ಲಿ ಹಾಲು ಮುಖ್ಯವಾಗಿ ಹಸುವಿನಿಂದ ಬರುತ್ತಿತ್ತು. ಹಸು ಹಿಂದೂಗಳಿಗೆ ಪೂಜನೀಯವಾದುದರಿಂದ ಅದರ ಹಾಲನ್ನು ಒಡೆಸುವದು ಧಾರ್ಮಿಕವಾಗಿ ಅಶುಭವೆಂದು ಭಾವಿಸಲಾಗುತ್ತಿತ್ತು. ಆದರೆ ಭಾರತಕ್ಕೆ ಪಾಶ್ಚಾತ್ಯರ ಆಗಮನವಾದ ಮೇಲೆ ಈ ಧಾರ್ಮಿಕ ನಂಬಿಕೆಯನ್ನು ಕೈಬಿಡಲಾಯಿತು.

ಕ್ರಿ.ಶ1498ರಲ್ಲಿ ಭಾರತದಲ್ಲಿ ವಾಸ್ಕೋಡಿಗಾಮನ ಆಗಮನವಾಯಿತು. 1511ರಲ್ಲಿ ಜರುಗಿದ ಮಲಕ್ಕಾ ಘರ್ಷಣೆಯ ನಂತರ ಪೋರ್ಚುಗೀಸರು ಬಂಗಾಳದ ಮೇಲೆ ಪ್ರಭುತ್ವವನ್ನು ಪಡೆದರು. ಅವರು ಚಿತ್‌ಗಾಂಗ್‌ನಲ್ಲಿ ಕೆಲವು ಕಾರ್ಖಾನೆಗಳನ್ನು ಸ್ಥಾಪಿಸಿದರು. ಹೀಗಾಗಿ ಬಂಗಾಳದಲ್ಲಿ ಅವರ ಜನಸಂಖ್ಯೆ ಹೆಚ್ಚತೊಡಗಿತು. ಕೆಲವೇ ದಿವಸಗಳಲ್ಲಿ ಬಂಗಾಳದಲ್ಲಿ ಐದು ಸಾವಿರ ಪೋರ್ಚುಗೀಸರು ವಾಸಿಸತೊಡಗಿದರು.

ಪೋರ್ಚುಗೀಸರಿಗೆ ಪನೀರ್ ತುಂಬ ಇಷ್ಟವಾದ ಪದಾರ್ಥವಾಗಿತ್ತು. ಅವರ ಬೇಡಿಕೆಯನ್ನು ಈಡೇರಿಸುವುದಕ್ಕಾಗಿ ಬಂಗಾಳದ ಹಲವಾಯಿಗಳು ತಮ್ಮ ಧಾರ್ಮಿಕ ಭಾವನೆಯನ್ನು ಬದಿಗೊತ್ತಿ ಹಾಲನ್ನು ಒಡೆಸಿ ಪನೀರ್ ತಯಾರಿಸಲು ಆರಂಭಿಸಿದರು.

ಆಗ ಕೋಲ್ಕತ್ತಾದಲ್ಲಿ ನೋಬಿನ್ ಚಂದ್ರದಾಸ ಎಂಬ ಹಲವಾಯಿಯ 'ದಾಸ್ ಸ್ವೀಟ್ಸ್' ಎಂಬ ಹೆಸರಿನ ಮಿಠಾಯಿ ಅಂಗಡಿ ಇತ್ತು. ಆತ ಹಾಲಿನಿಂದ ಹೊಸ ಹೊಸ ತಿಂಡಿಗಳನ್ನು ತೈಯಾರಿಸುವ ಪ್ರಯೋಗಗಳನ್ನು ಮಾಡುತ್ತಿದ್ದ. ಒಂದು ದಿನ ನೋಬಿನದಾಸ್ ಹಲವಾಯಿಗೆ ಅದೇನೆನಿಸಿತೋ ಅವನು ಪನೀರಿನಿಂದ ದುಂಡಾದ ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿ ಜರಡಿಯಲ್ಲಿ ಹಾಕಿ ಆವಿಯಲ್ಲಿ ಅವುಗಳನ್ನು ಬೇಯಿಸಿ ಸಕ್ಕರೆ ಪಾಕದಲ್ಲಿ ಅದ್ದಿದ. ಹೀಗೆ ರಸಗುಲ್ಲಾ ಎಂಬ ಹೊಸ ತಿಂಡಿಯ ಅವಿಷ್ಕಾರವಾಯಿತು.

ಒಂದು ದಿನ ಭಗವಾನದಾಸ ಬಾಗಲಾ ಎಂಬ ಪ್ರತಿಷ್ಠಿತ ಮಾರವಾಡಿ ಸೇಠ ತನ್ನ ಕುಟುಂಬ ಸಮೇತನಾಗಿ ದಾಸ್ ಸ್ವೀಟ್ಸ್ ಅಂಗಡಿಯ ಎದುರಿನಿಂದ ಹಾದು ಹೋಗುತ್ತಿದ್ದ. ಆಗ ಅವನ ಮಕ್ಕಳು ನೀರನ್ನು ಕುಡಿಯುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಮಕ್ಕಳಿಗೆ ನೀರನ್ನು ಕುಡಿಸುವ ಉದ್ದೇಶದಿಂದ ಆ ಮಾರವಾಡಿ ಸೇಠ ನೋಬಿನ್ದಾಸನ ಅಂಗಡಿಯನ್ನು

ಪ್ರವೇಶಿಸಿದ. ಆಗ ನೋಬಿನ ಚಂದ್ರದಾಸ ನೀರಿನೊಂದಿಗೆ ತಾನು ತಯಾರಿಸಿದ ಹೊಸ ಮಿಠಾಯಿಯನ್ನು ಆ ಮಕ್ಕಳಿಗೆ ನೀಡಿದ. ಆ ತಿಂಡಿ ಮಕ್ಕಳಿಗೆ ತುಂಬ ಹಿಡಿಸಿತು. ಅವರು ಇನ್ನಷ್ಟು ತಿಂಡಿ ಬೇಕೆಂಬ ಆಸೆ ವ್ಯಕ್ತಪಡಿಸಿದರು. ಮಕ್ಕಳ ಉತ್ಸುಕತೆಯನ್ನು ಕಂಡು ಆ ಮಾರವಾಡಿ ವ್ಯಾಪಾರಿ ತಾನೂ ಆ ತಿಂಡಿಯನ್ನು ತಿಂದು ನೋಡಿದ.

ಅದು ಆತನಿಗೂ ತುಂಬ ಹಿಡಿಸಿತು. ಅವನು ನೋಬಿನ ಚಂದ್ರದಾಸನ ಅಂಗಡಿಯಲ್ಲಿರುವ ಎಲ್ಲ ರಸಗುಲ್ಲಾಗಳನ್ನು ಖರೀದಿಸಿದ. ಅಷ್ಟೆ ಅಲ್ಲ ತನ್ನ ಬಂಧು ಬಾಂಧವರಲ್ಲಿ ಹಂಚಲು ಇನ್ನಷ್ಟು ರಸಗುಲ್ಲಾಗಳನ್ನು ತಯಾರಿಸಿ ಕೊಡುವಂತೆ ಆರ್ಡರ್ ನೀಡಿದ. ಈ ರೀತಿಯಾಗಿ ನೋಬಿನ್ ಚಂದ್ರ ದಾಸನ ದಾಸ್ ಸ್ವೀಟ್ಸ್ ಎಂಬ ಅಂಗಡಿ ರಸಗುಲ್ಲಾ ಎಂಬ ಹೊಸ ಸಿಹಿ ತಿಂಡಿಗೆ ಪ್ರಸಿದ್ಧವಾಯಿತು. ■